Supply of Electricity to Kodagenahalli Hobli (Inconveniences).

Q.—473. Sri MUDDURAMIAH (Koratagere-Madhugiri).—

Will the Government be pleased to state :—

(*a*) whether it has come to their notice that electric power for irrigation is being supplied on alternate days in Kodagenahalli Hobli ;

(*b*) whether they would consider the fact that by doing so, much inconvenience is caused to the raiyats for cultivation ?

A.—Dr. R. NAGAN GOWDA (Minister for Agriculture).—

(*a*) Yes.

(*b*) In the present conditions no other course is possible, but the question will be considered as soon as possible.

ಶ್ರೀ ಮುದ್ದುರಾಮಯ್ಯ.—ಬತ್ತದ ಬೆಳೆಗೆ ದಿನ ಬಿಟ್ಟು ದಿನ ನೀರನ್ನು ಬಿಡುತ್ತಿರುವುದರಿಂದ ಆ ಬೆಳೆಗೆ ಈಗ ಬರಳ ತೊಂದರೆಯಾಗಿರುತ್ತದೆಂಬ ಅಂಶ ತಮ್ಮ ಅವಗಾಹನೆಗೆ ಬಂದಿದೆಯೇ ?

ಡಾ॥ ಆರ್. ನಾಗನ ಗೌಡ.—ಸ್ವಲ್ಪ ತೊಂದ್ರೆ ಆಗುತ್ತೆ.

ಶ್ರೀ ಮುದ್ದುರಾಮಯ್ಯ.. ಕಳೆದ ವರ್ಷವೂ ಸಹ ಜನರಿಗೆ ಇದೇ ರೀತಿ ನೀರಿಗೆ ಮಾರ್ಗವಿಲ್ಲದೆ ತೊಂದರೆ ಪಟ್ಟಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನ ಗೌಡ.—ಆದರೆ ಇದರಲ್ಲಿ ಒಂದು ವಿಷಯ ಇದೆ. ನಮ್ಮಲ್ಲಿ ಇರುವ ಪವರ್ ಸಪ್ಲೈಯೇ ಬಹಳ ಕಡಮೆ. ಮೇಲಾಗಿ ಟ್ರಾನ್ಸ್‌ಫಾರ್ಮರುಗಳು ಸಹ ನಮ್ಮಲ್ಲಿ ಬಹಳ ಕಡಮೆ ಇವೆ. ಹಾಕಬಾರದುದಕ್ಕಿಂತ ಹೆಚ್ಚು ಲೋಡನ್ನು ಈಗ ಹಾಕಿರುವುದರಿಂದಲೇ ನಮಗೆ ಈ ಹೆಚ್ಚಿನ ತೊಂದರೆ ಗಳೆಲ್ಲಾ ಬಂದಿವೆ.

ಶ್ರೀ ಮುದ್ದುರಾಮಯ್ಯ.—ಗೋರಿಬಿದನೂರಿನಲ್ಲಿ ಒಂದು ಟ್ರಾನ್ಸ್‌ಫಾರ್ಮರನ್ನು ಹಾಕುವುದರ ಬಗ್ಗೆ ಇಲಾಖೆಯವರು ಶಿಫಾರ್ಸು ಮಾಡಿರುವುದು ನಿಜವೇ ?

ಡಾ॥ ಆರ್. ನಾಗನ ಗೌಡ.—ಚಿಕ್ಕಬಳ್ಳಾಪುರದಿಂದ ಒಂದನ್ನು ತಂದು ಇಲ್ಲಿಗೆ ಹಾಕಬೇಕೆಂದು ಏರ್ಪಾಡು ಮಾಡಲಾಗಿತ್ತು.

ಶ್ರೀ ಮುದ್ದುರಾಮಯ್ಯ.—ಚಿಕ್ಕಬಳ್ಳಾಪುರದಿಂದ ಇಲ್ಲಿಗೆ ಒಂದನ್ನು ಸಾಗಿಸಬೇಕೆಂಬ ಒಂದು ನಲಹೆ ಇರಲಿಲ್ಲವೇ ?

ಡಾ॥ ಆರ್. ನಾಗನ ಗೌಡ.—ಅದನ್ನೇ ಈಗ ನಾನು ಹೇಳಿದ್ದು.

ಶ್ರೀ ಮುದ್ದುರಾಮಯ್ಯ.—ಇಲ್ಲಿಗೆ ತರಬೇಕೆಂದು ಉದ್ದೇಶಿಸಿದ್ದ ಪೆಪನರಿಗಳನ್ನೇ ದೊಡ್ಡಬಳ್ಳಾಪುರಕ್ಕೆ ಈಗ ಸಾಗಿಸಿದ್ದಾರಲ್ಲವೇ ?

ಡಾ॥ ಆರ್. ನಾಗನ ಗೌಡ.—ದೊಡ್ಡಬಳ್ಳಾಪು ರಕ್ಕೆ ಕಳುಹಿಸಲಲ್ಲ.

ಶ್ರೀ ಮುದ್ದುರಾಮಯ್ಯ.—ಹೋಗಲು ತಾವು ಅಲ್ಲರತಕ್ಕ ಜನರ ಕಷ್ಟವನ್ನು ಪರಿಹಾರ ಮಾಡಲಕ್ಕೆ ಪ್ರಯತ್ನ ಮಾಡುವಿರಾ ?

ಡಾ॥ ಆರ್. ನಾಗನ ಗೌಡ.—ಮಾಡುತ್ತೇವೆ.

ಶ್ರೀ ಎಚ್. ಸಿ. ನಾಗಯ್ಯ ರೆಡ್ಡಿ.—ಇಲ್ಲಗೆ 2 ವರ್ಷ ಗಳಿಂದಲೂ 6 ಗಂಟೆಗಳವರೆಗೂ ಸಹ ಬೆಳೆಗೆ ನೀರು ದೊರೆಯುತ್ತಿಲ್ಲವೆಂದು ಹೇಳುತ್ತಿರುವಾಗ, ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ತಾವು ಏನು ಪ್ರಯತ್ನಗಳನ್ನು ಮಾಡಿದ್ದೀರಿ ?

Mr. SPEAKER.—"The question will be considered as soon as possible". That is the written answer.

ಶ್ರೀ ಎಚ್. ಸಿ. ನಾಗಯ್ಯ ರೆಡ್ಡಿ.—ಇಲ್ಲಗೆ 2 ವರ್ಷ ಗಳಿಂದೇನು ಮಾಡಿದ್ದೀರೆಂದು ಕೇಳುತ್ತಿದ್ದೇನೆ ! ಪರಿಸ್ಥಿತಿ ಇದ್ದಹಾಗೇ ಇದೆಯಲ್ಲಾ !

Mr. SPEAKER.—Now it will be expedited.

Electricity to Sadali and Thimmasandra (Progress of Work.)

Q.—560. Sri G. PAPANNA (Sidlaghatta- Chikballapur).—

Will the Government be pleased to state :—

(*a*) when the estimate for the supply of electricity to Sadali and Thimmasandra of Sidlaghatta taluk was sanctioned ;

(*b*) the amounts that have been provided each year to implement the works conducted with this estimate (Budget figures to be given) ;

(*c*) how much work has now been done ?

A.—Dr. R. NAGAN GOWDA (Minister for Agriculture).—

(*a*) In November 1949.

(*b*) Rs. 1,00,000 in the Budget for 1953-54.

(*c*) A few buildings have been completed. The revised estimate for the work is under consideration.

ಶ್ರೀ ಜಿ. ಪಾಪಣ್ಣ.—ಕೆಲವು ಕಟ್ಟಡಗಳು ಪೂರ್ತಿ ಯಾಗಿವೆಯೆಂದು ಹೇಳಿದ್ದೀರಿ. ಅವೂ ಸಹ ಈ ಅಂದಾಜಿ ನಲ್ಲಿ ಸೇರಿರುತ್ತವೆಯೇ ?

ಡಾ॥ ಆರ್. ನಾಗನಗೌಡ.—ಯಾವ ಅಂದಾಜಿ ನಲ್ಲಿ ತಾವು ಕೇಳುತ್ತಿರುವುದು ?

ಶ್ರೀ ಜಿ. ಪಾಪಣ್ಣ.—ಈಗ ತಾವು ಇಲ್ಲಿ ನೂಚಿಸಿ ರುವ ತಿದ್ದುಪಾಟಾದ ಅಂದಾಜಿನಲ್ಲಿ ?

ಡಾ॥ ಆರ್. ನಾಗನಗೌಡ.—ಸೇರಿರುತ್ತವೆ.